ದಿನಾಂಕ: 17-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ 1 ಮತ್ತು 2 ರವರ ಪರ ವಕೀಲರಾದ ಶ್ರೀ. ಟಿ ಎನ್ ಎಸ್ ವಕೀಲರಿಂದ

ದಾವಾ ಆಸ್ತಿಯು ಮೊದಲ ಬಾರಿ ನಮ್ಮ ಕುಟುಂಬಕ್ಕೆ 2003-2004 ನೇ ಇಸವಿಯಲ್ಲಿ ಬಂದಿರುತ್ತದೆ. ಪಿಡಿಓ, ಚೇರ್ ಮೇನ್ ಅಳತೆ ಮಾಡಿ ದಾವಾ ಆಸ್ತಿಯನ್ನು ಕೊಟ್ಟಿರುತ್ತಾರೆ. ಪಂಚಾಯ್ತಿ ಯವರು ಗ್ರಾಂಟ್ ಸರ್ಟಿಫಿಕೇಟ್ ಕೊಟ್ಟಿರುವ ಬಗ್ಗೆ ಗೊತ್ತಿರುವುದಿಲ್ಲ. ಆದರೆ ಡಿಮ್ಯಾಂಡ್ ಮತ್ತು ಹೌಸ್ ಲೀಸ್ಟ್ ರಿಜಿಸ್ಟರ್ ನ್ನು ಕೊಟ್ಟಿರುತ್ತಾರೆ. ದಾವಾ ಎ ಷೆಡ್ಯೂಲ್ ಆಸ್ತಿಯು ಪಂಚಾಯ್ತಿಗೆ ಸೇರಿರುತ್ತದೆ. ದಾವಾ ಎ ಷೆಡ್ಯೂಲ್ ಆಸ್ತಿಯು ಪಂಚಾಯಿತಿಗೆ ಸೇರಿದೆ ಎಂಬುದಕ್ಕೆ ಬೇರೆ ಯಾವುದೇ ದಾಖಲೆ ಇರುವುದಿಲ್ಲ. 2003-04 ನೇ ಇಸವಿಯಲ್ಲಿ ಮೊದಲ ಬಾರಿಗೆ ಪಂಚಾಯ್ತಿ ದಾಖಲೆಗಳನ್ನು ನನ್ನ ತಾತನ ಹೆಸರಿನಲ್ಲಿ ಕೊಟ್ಟಿರುತ್ತಾರೆ. 2003-04 ನೇ ಇಸವಿಯಲ್ಲಿ ನನ್ನ ತಾತ ಬದುಕಿರುತ್ತಾರೆ. ಆ ದಾಖಲೆಗಳನ್ನು ಕೊಡುವಾಗ ಪಂಚಾಯಿತ್ತಿಯಲ್ಲಿ ನಡುವಳಿ ಮಾಡಿರುತ್ತಾರೆ. ಯಾವ ದಾಖಲೆಯ ಆಧಾರದ ಮೇಲೆ ಪಂಚಾಯ್ತಿ ದಾಖಲೆಗಳನ್ನು ನಿಮಗೆ ಕೊಡಬೇಕೆಂದು ನಡುವಳಿ ಆಗಿದೆ ಎಂದರೆ ಸಾಕ್ಷಿಯು ಸ್ವಾಧೀನದ ಮೇಲೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಮಾಲೀಕತ್ವದ ದಾಖಲೆಯನ್ನು ನೀವು ಪಂಚಾಯ್ತಿಯಲ್ಲಿ ಕೊಟ್ಟಿರುವುದಿಲ್ಲ ಎಂದರೆ ಸರಿ. ಮಾಲೀಕತ್ತದ ಬಗ್ಗೆ ನಿಮಗಾಗಲಿ ನಿಮ್ಮ ಕುಟುದವರಿಗಾಗಲಿ ಯಾವುದೇ ದಾಖಲೆಗಳನ್ನು ಇರುವುದಿಲ್ಲ ಎಂದರೆ ಸಾಕ್ಷಿಯು ಮೊದಲಿನಿಂದಲೂ ಇರುವುದಿಲ್ಲ ಎಂದು ನುಡಿಯುತ್ತಾರೆ. ಮಾಲೀಕತ್ವದ ಬಗ್ಗೇ ಈಗಲೂ ದಾಖಲೇ ಇರುವುಲ್ಲ ಎಂದರೆ ಗೊತ್ತಿರುವುದಿಲ್ಲ. ಈಗ ನ್ಯಾಯಾಲಯಕ್ಕೆ ಹಾಜರು ಪಡಿಸಿರುವದ ದಾಖಲೆಗಳನ್ನು ಹೊರತು ಪಡಿಸಿ ಮಾಲೀಕತ್ವದ ಬಗ್ಗಕೆ ದಾಖಲೆಗಳು ಇರುವುದಿಲ್ಲ. ಪಂಚಾಯ್ತಿಯವರ ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ ಮಹಜರ್

ಮಾಡಿರುತ್ತಾರೆ.  ಆ ಮಹಜರ್ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಈ ದಾಖಲೆಯನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಮಹಜರ್ ಪ್ರತಿಯಲ್ಲಿ ವಿಸ್ತೀರ್ಣ ಮತ್ತು ಚೆಕ್ಕುಬಂದಿಗಳನ್ನು ಬರೆದಿರುತ್ತಾರೆ ಈಗಲೂ ಅದು ಪಂಚಾಯ್ತಿಯಲ್ಲಿ ಇರುತ್ತದೆ.  ಚೆಕ್ಕುಬಂದಿ ಯ ಮಹಜರ್ ಕಾಪಿ ನನ್ನ ಗೊತ್ತಿರುವುದಿಲ್ಲ. ಸಾಕ್ಷಿಯು ಮಹಜರ್ ಕಾಫಿಯಲ್ಲಿ ಪುನಃ ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ಬರೆದಿರುವ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ಮೊದಲ ಬಾರಿಗೆ ಯಾವ ವರ್ಷದಲ್ಲಿ ನಮೂದು ಮಾಡಿರುತ್ತಾರೆ ಎಂದು ಅದು ಗೊತ್ತಿರುವುದಿಲ್ಲ ಸಾಕ್ಷಿಯು ಮುಂದುವರೆದು **2003/04** ರಲ್ಲಿ ಎಂದು ನುಡಿಯುತ್ತಾರೆ. ಆ ದಾವಾ ಆಸ್ತಿಯ ಚೆಕ್ಕುಬಂದಿ ಯಾವ ದಾಖಲೆ ಮತ್ತು ಯಾವ ದಾಖಲೆಯ ಆಧಾರದ ಮೇಲೆ ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ.

ನಮಗೆ ಒಂದು ಮನೆ, ಒಂದು ಸೈಟು ಇರುತ್ತದೆ.  ದಾವಾ ಎ ಷೆಡ್ಯೂಲ್ ಆಸ್ತಿಯ ನಿಮ್ಮ ಕುಟುಂಬಕ್ಕೂ ಸಂಬಂಧ ಇರುವುದಿಲ್ಲ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯ್ತಿಯಲ್ಲಿ ಆ ಆಸ್ತಿಯ ಬಗ್ಗೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು **15, 15** ಎ ಆಸ್ತಿಯನ್ನು ಕೊಟ್ಟಿರುತ್ತೇನೆ. ನಾನು ದಾಖಲೆಯನ್ನು ಮನೆ ಮತ್ತು ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ಕೊಟ್ಟಿರುತ್ತೇನೆ ಅದು ಎರಡಕ್ಕೂ  ಅನ್ವಯವಾಗುತ್ತದೆ. **15** ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ , ಪಶ್ಚಿಮಕ್ಕೆ **6** ಅಡಿ ಸಂದು , ಉತ್ತರಕ್ಕೆ ನಮ್ಮ ಸ್ವಂತ ಮನೆ, ದಕ್ಷಿಣಕ್ಕೆ ಸರ್ಕಾರಿ ರಸ್ತೆ . ಪ್ರತಿವಾದಿಗಳ ಆಸ್ತಿಯು **6** ಅಡಿ ಸಂದು ನಂತರ ಬರುತ್ತದೆ.  **15** ರಆಸ್ತಿಯು ನೀವು ಈಗ ಹೇಳಿದ ಚೆಕ್ಕುಬಂದಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ಗ್ರಾಮಪಂಚಾಯ್ತಿಯಲ್ಲಿ ನೀವು ಸೃಷ್ಟಿ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. **15** ರ ಆಸ್ತಿಯು ನಿಮ್ಮದಲ್ಲ,  ಆ ಸಂದು ದಾರಿಯೂ ನಿಮಗೆ ಸಂಬಂಧ ಇರುವುದಿಲ್ಲ ಎಂದರೆ

ಸರಿಯಲ್ಲ. ಈಗ ತೋರಿಸುತ್ತಿರುವ ಪೊಟೋದಲ್ಲಿ ಪ್ರತಿವಾದಿಯರು ಮನೆಕಟ್ಟುತ್ತಿದ್ದಾರೆ ಎಂದರೆ ಸರಿ. ಪೊಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಡಿ **1** ಮತ್ತು **2** ಮತ್ತು ಸಿಡಿಯನ್ನು ನಿಡಿ-**3** ಎಂದು ಗುರುತಿಸಲಾಯಿತು. **2020** ನೇ ಇಸವಿಯಲ್ಲಿ ಪ್ರತಿವಾದಿ ಪಾಯ ಹಾಕಿರುತ್ತಾರೆ. ಆಗಿನಿಂದ ಪ್ರತಿವಾದಿರು ಬಿಟ್ಟು ಬಿಟ್ಟು ಮನೆಯನ್ನು ಕಟ್ಟುತ್ತಿದ್ದಾರೆ. ಈಗೆ ಪೊಟೋದಲ್ಲಿ ತೋರಿಸುತ್ತಿರುವ ಸ್ಟೇರ್ ಕೇಸ್ ಗೆ ಸಂಬಂಧಿಸಿದಂತೆ ನಿಮ್ಮ ತಕರಾರು ಇರುವುದು ಎಂದರೆ ಸರಿ. ಮನೆಕಟ್ಟಲು ತಕರಾರು ಇರುವುದಿಲ್ಲ. ಸ್ಟೇರ್ ಕೇಸ್ ಗೆ ನಿಮ್ಮ ತಕಾರಾರು ಎಂದರೆ ಸಾಕ್ಷಿಯು ಮೊದಲು ಮನೆ ಕಟ್ಟಿದ್ದು, ನಂತರ ಸ್ಟೇರ್ ಕೇಸ್ ಕಟ್ಟಿರುತ್ತಾರೆ. ಸ್ಟೇರ್ ಕೇಸ್ ಹಾಕುತ್ತಿದ್ದಾಗೆ ನಾನು ದಾವೆ ಸಲ್ಲಿಸಿರುತ್ತೇನೆ. ನೀವು ದಾವಾ ಸಲ್ಲಿಸುವ ಕಾಲಕ್ಕೆ ಸ್ಟೇರ್ ಕೇಸ್ ನ್ನು ಎಷ್ಟು ಹಾಕಿದ್ದರೋ ಅಲ್ಲಿಗೆ ನಿಲ್ಲಿಸಿರುತ್ತಾರೆ ಎಂದರೆ ಸರಿ. ಪೂರ್ವಕ್ಕೆ ಇರುವ **6** ಅಡಿ ಸಂದು ದಾರಿಗೆ ಬಾಗಿಲನ್ನು ಇಟ್ಟಿರುವುದು ಎಂದರೆ ಸರಿ. ನೀವು ದಾವೆ ಸಲ್ಲಿಸಿರುವ ಬಿ ಷೆಡ್ಯೂಲ್ ನ **6** ಅಡಿ ಸಂದು ದಾರಿಗೆ ಬಾಗಿಲು ಮತ್ತು ಸ್ಟೇರ್ ಕೇಸ್ ಬರುತ್ತದೆ ಎಂದರೆ ಸರಿ. ನಾನು ದಾವೆ ಸಲ್ಲಿಸುವ ಕಾಲಕ್ಕೆ ಆ ಮನೆಗೆ ಬಾಗಿಲು ಇಟ್ಟು **1** ವರ್ಪ ಆಗಿರುತ್ತದೆ. ಪ್ರತಿವಾದಿ ಕಟ್ಟುತ್ತಿರುವ ಮನೆಗೆ **6** ಅಡಿ ಸಂದು ದಾರಿಯಲ್ಲಿಯೇ ಬರಬೇಕು ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

Plaintiff counsel present, plaintiff filed application U/sec. 7 rule 14 (3) of CPC on IA No.III along with documents. Defendant counsel submits no objection to IA hence in the interest of justice and equity IA No.III is hereby allowed, documents taken on record.

Plaintiff counsel present filed memo along with documents. Plaintiff examined as PW1. Chief examination

filed by way of affidavit, got marked ExP1 to ExP11.

For further chief of pw1.

Call on 05-07-2022.

**Prl. C. J. & JMFC,.**
**Chintamani**.